11. ಶ್ರೀ ಶ್ರೀಕಾಂತ್ ಅಂಬದಗಟ್ಟಿ

12. ಶ್ರೀ ಎನ್.ಡಿ. ಜಯರಾಂ

13. ಶ್ರೀ ರಾಮಲಿಂಗರೆಡ್ಡಿ

14. ಶ್ರೀ ಸಿ.ಎಂ. ಉದಾಸಿ

15. ಶ್ರೀ ಕೆ.ಎನ್. ನಾಗೇಗೌಡ

16. ಶ್ರೀ ಅಜಯಕುಮಾರ್ ಸರನಾಯಕ್

17. ಶ್ರೀ ಎಂ.ಪಿ. ಪ್ರಕಾಶ್

18. ಶ್ರೀ ಆರ್.ವಿ. ದೇಶಪಾಂಡೆ

19. ಶ್ರೀಮತಿ ವಿಮಲಾಬಾಯಿ ದೇಶಮುಖ

20. ಶ್ರೀಮತಿ ಟಿ.ಬಿ. ಲಲಿತಾನಾಯಕ್

21. ಶ್ರೀ ರಮೇಶ್ ಕುಮಾರ್.

ಇನ್ನು ಕೆಲವರ ಹಣ ಅಕೌಂಟ್ಸ್ ಸೆಕ್ಷನ್‌ಗೆ ಹೋಗಿದೆ. ಕೆಲವರು ನೇರವಾಗಿ ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ಚಂಡಮಾರುತ ಪರಿಹಾರ ನಿಧಿಗೆ ತಮ್ಮ ಹಣವನ್ನು ಕಳುಹಿಸಿದ್ದಾರೆ. ದಯಮಾಡಿ ಆ ಹೆಸರುಗಳನ್ನೆಲ್ಲಾ ಕೊಟ್ಟರೆ ಅವುಗಳನ್ನು ಕೂಡ ಓದಿ ಹೇಳಿಬಿಡುತ್ತೇನೆ. ಹಣ ಕೊಟ್ಟಿದ್ದು ಅಂತಹವರ ಹೆಸರು ಅಚಾತುರ್ಯದಿಂದ ಬಿಟ್ಟುಹೋಗಿದ್ದರೆ ಅದನ್ನು ನಮ್ಮ ಕಚೇರಿಗೆ ವರ್ತಮಾನ ಕೊಟ್ಟರೆ ಪಟ್ಟಿ ಮಾಡಿ ಮುಂದಿನ ಸಲ ಓದುತ್ತೇನೆ. ಇವರೆಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ. ಈಗ ಸದನವನ್ನು ಮುಂದೂಡಿ ಪುನಃ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು 2-05 ಗಂಟೆಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸಭೆಯು ಪುನಃ 3.20ಕ್ಕೆ ಸಮಾವೇಶಗೊಂಡಿತು

(ಶ್ರೀ ರಮೇಶ್ ಕುಮಾರ್) ರವರು ಅಧ್ಯಕ್ಷರು, ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು: ಮಾನ್ಯ ನಂಜೇಗೌಡರೇ, ನಿಮ್ಮ ಭಾಷಣಕ್ಕೆ ಹೀಗೆ ಆಯಿತಲ್ಲಾ. ನೀವು ಔಟ್ ಡೇಟೆಡ್ ಆದಿರಿ ಎಂದು. ಸರ್ಕುಲೇಷನ್‌ನಲ್ಲಿ ಇದ್ದೀರಿ. ಹೊಸ ಬ್ಲಡ್ ಬಂದಿದೆಯಲ್ಲಾ. ಚರ್ಚೆಯನ್ನು ಪ್ರಾರಂಭಮಾಡಿಸೋಣವೇ ಅಥವಾ ಕೆಇಬಿ ರೆಸಲ್ಯೂಷನ್ ಇದೆ. ಅದನ್ನು ತೆಗೆದುಕೊಂಡು ಬಿಡೋಣವೇ? ಅಷ್ಟು ಹೊತ್ತಿಗೆ ಸ್ವಲ್ಪ ಹೀಟ್ ಜನರೇಟ್ ಆಗುತ್ತದೆ. ಕೆ.ಇ.ಬಿ ವಿಚಾರ ಚರ್ಚೆ ಮಾಡಬೇಕಾ?

ಶ್ರೀ ವೈ ರಾಮಕೃಷ್ಣ: ಚರ್ಚೆ ಇಲ್ಲದೇ ಹೇಗೆ ರೆಸಲ್ಯೂಷನ್ ಆಗುತ್ತದೆ? ಪ್ರೊಸೀಜರ್ ಇದೆಯಲ್ಲಾ.

ಅಧ್ಯಕ್ಷರು: ಪ್ರೊಸೀಜರ್ ಸರಿ ಇದೆ. ಕೆಇಬಿ ಸ್ಟಾಟ್ಯುಟರಿ ರೆಸಲ್ಯೂಷನ್ ಬಗ್ಗೆ ಚರ್ಚೆ ಆಗಬೇಕಾ? ಎರಡೆರಡು ನಿಮಿಷ ನೀವ್ಯಾರಾದರೂ ಮಾತನಾಡಿ, ಮುಗಿಸಿಬಿಡೋಣ. ಜನ ಬರಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ತಂದಿದ್ದು ಏನೋ ಈ ವಿಚಾರ ನೋಡಿಲ್ಲ. ಮುಂಚೆ ಇದನ್ನು ಇಟ್ಟಿದ್ದರೆ ಚೆನ್ನಾಗಿತ್ತು.

ಅಧ್ಯಕ್ಷರು: ಈಗ ರೆಸಲ್ಯೂಷನ್ ಮೂವ್ ಮಾಡಿ. ಎರಡೆರಡು ನಿಮಿಷ ನೀವ್ಯಾರೂ ಹೇಳಿದರೆ ಮುಗಿಸಿ ಬಿಡೋಣ. ಅಷ್ಟು ಹೊತ್ತಿಗೆ ಜನ ಬರುತ್ತಾರೆ. ಚರ್ಚೆ ಹತ್ತು ನಿಮಿಷ ತೆಗೆದುಕೊಳ್ಳೋಣ. ಜನ ಬಂದ ಮೇಲೆ ಆಮೇಲೆ ತಾವು ಭಾಷಣ ಪ್ರಾರಂಭ ಮಾಡಿ.

ಶ್ರೀ ಅರಗಜ್ಞಾನೇಂದ್ರ: ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸಂಜೇಗೌಡರಂತಹ ಹಿರಿಯರು ಮಾತನಾಡುವಾಗ ಸದಸ್ಯರುಗಳು ಬರಬೇಕು. ನಾವುಗಳು ಮಾತನಾಡುವಾಗ ಮಂತ್ರಿಗಳು ಬರುವುದಿಲ್ಲ. ಅವರುಗಳು ಮಾತನಾಡುವಾಗಲಾದರೂ ಸದನ ತುಂಬಿದ್ದರೆ ಚೆನ್ನಾಗಿ ಇರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮೇಲ್ಮನೆಗೆ ಹೋಗಿದ್ದಾರೆ.

ಅಧ್ಯಕ್ಷರು: ಕೆಲವರು ಮೇಲ್ಮನೆಗೆ ಹೋಗಿದ್ದಾರೆ. ಕೆಲವರು ಇಲ್ಲಿದ್ದಾರೆ. ಕೆಲವರು ಅವರ ಮನೆಗೆ ಹೋಗಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ: ತಾವೇ ಹೇಳುತ್ತಿರುತ್ತೀರಿ. ತಿಳಿದಂತಹವರು, ಎಂದು ತಿಳಿದಂತಹವರು ಮಾತನಾಡುವಾಗ ಸಮಯದಲ್ಲಿ ಜನ ಇರಬೇಕಲ್ಲಾ.

ಅಧ್ಯಕ್ಷರು: ಶ್ರೀರಾಮರೆಡ್ಡಿಯವರ ಕಷ್ಟ ಕೇಳಿದಿರಾ ಮಾನ್ಯ ಪ್ರಕಾಶ್ ಅವರೇ? ಯಾರಿಗೆ ಮನೆ ಇಲ್ಲ ಅವರಿಗೇನು ಗತಿ ಎಂದು ಕೇಳಿದರು. ಏಕೆಂದರೆ ಅವರಿಗೆ ಮನೆ ಇಲ್ಲವಲ್ಲಾ ನಿಮಗೆ ಯಾರ ಮನೆಯವರು ಕರೆದುಕೊಂಡರೆ ಅಲ್ಲಿಗೆ ಹೋಗಬಹುದು.

ಶ್ರೀ ಎಲ್ ಆರ್ ಶಿವರಾಮೇಗೌಡ: ಶ್ರೀರಾಮ ರೆಡ್ಡಿಯವರಿಗೂ ಮನೆ ಇದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ: ಮಾನ್ಯ ಸಿರಿಧ್ಯಾ ಅವರು ಮನೆಗೆ ಏಕೆ ಹೋಗಲಿಲ್ಲ ಎನ್ನುವ ಪ್ರಶ್ನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದರ ಬಗ್ಗೆ ವಿವರಣೆ ಮಾಡಲಿ. ಹಾಗೆ ವಿವರಣೆ ಮಾಡಬೇಕಾದರೂ ಪವರ್ ಮಿನಿಸ್ಟರ್ ಬೇಕಲ್ಲ.